1907ನೆ ಇಸವಿ ಮಾರ್ಚ್ 16ರಲ್ಲು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಮೈಸೂರು ಡಿಸ್ಟ್ರಿಕ್ಟಿನಲ್ಲಿ ಈ ಕೆಳಗೆ ನಮೂದಿಸುವ ಸ್ಥಳದಲ್ಲಿ ಅದರ ಬಾಜೂದಲ್ಲಿ ಕಂಪ ಹಾರೀಖುಗಳಲ್ಲಿ ಜಂಗಲ್ ಪಸಾರ ಜಿನಸುಗಳನ್ನು ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ :—

ನಂಬರು.	ಸ್ಥಳ.	ಹರಾಜು ತಾರೀಖು.	ಹರಾಜು ಮಾಡಿಸುವ ಆಫಿಸರವರ ಹೆಸರು.	ಪಸಾರ ಜಿನಸಿ ವೊತ್ತ.	
				ಅವ್ವಲಿ ಅರಗು.	ಆಳಲಿಕಾಯಿ.
1	ಶ್ರೀರಂಗಪಟ್ಟಣದ ಕೋಠಿ	15—4—07	ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರು	ಮಣ. ಪ. 90 0	ಮಣ. ಪ. 1,500 0

ಪರತ್ತು :—1887ನೆ ಇಸವಿ ಜೂ॥ 18ನೆ ಮತ್ತು ಮೈಸೂರು ಗೆಜೆಟಿನ 287—288ನೆ ಪುಟುಗಳಲ್ಲಿ ಇರುವ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರ 87ನೆ ಇಸವಿ ಜೂ॥ 11ನೆ ಮತ್ತು ನೋಟಿಫಿಕೇಷನ್ನನ್ನು ನೋಡಿ.

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟು.

ನೋಟಿಸ್.

ತಾರೀಖು 3ನೆ ಏಪ್ರಿಲ್ 1907.

ಶಿಕಾರಿಪುರ ಫಾರೆಸ್ಟು ರೇಂಜಿನ ಗಾರ್ಡ್ (ಮೃತಪಟ್ಟ) ಅಬ್ದುಲ್ ರಹಿಮಾ ಎಂಬವನಿಗೆ 1906ನೆ ಮೇ ಮತ್ತು ಜೂ॥ ಮಾಹೀಗೆ ಸಲ್ಲತಕ್ಕ ಸಂಬಳದ ಮೊಬಲಗು ರೂಪಾಯಿ 3—14—11 ಶಿಕಾರಿಪುರ ಫಾರೆಸ್ಟು ರೇಂಜು ಆಫಿಸಿನಲ್ಲಿ ಪಾವತಿ ಮಾಡದೆ ನಿಂತಿರುತ್ತೆ.

ಸದರಿ ಮೃತಪಟ್ಟ ಗಾರ್ಡಿನ ವಾರಿಸ್‌ದಾರರು ಯಾರಾದರು ಇದ್ದಲ್ಲಿ ಸದರಿ ಹಣಕ್ಕಾಗಿ ತಕ್ಕ ಸವಿಜಾಯಿಷಿಯೊಡನೆ ಈ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ ನಮ್ಮ ಆಫಿಸಿಗೆ ಬರಮಾಡಿಕೊಳ್ಳಬೇಕು. ತಪ್ಪಿದಲ್ಲಿ ಸದರಿ ಮೊಬಲಗು ಸರಕಾರಕ್ಕೆ ಸೇರಿಸಿಕೊಳ್ಳಲಾಗುತ್ತೆ.

ಜೆ. ಮಾರ್ಟಿರೋ,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್, ಶಿವಮೊಗ್ಗ ಡಿಸ್ಟ್ರಿಕ್ಟು.

ನೋಟಿಫಿಕೇಷನ್.

ತಾರೀಖು 3ನೆ ಏಪ್ರಿಲ್ 1907ನೆ ಇಸವಿ, ಚಿಕ್ಕಮಗಳೂರು.

ಸ್ಯ॥ 1900ನೆ ಇಸವಿಯ ನಂ॥ರು 11ನೆ ಫಾರೆಸ್ಟು ರೆಗ್ಯುಲೇಷನ್ 40ನೆ ಸೆಕ್ಷನ್ ವೇರೆ ಈ ಕೆಳಗೆ ನಮೂದಿರುವ ನಾಟೂ ತುಂಗಾಪುರದ ಹತ್ತರ ಭದ್ರಾನದಿಯಲ್ಲಿ ತೇಲಿಕೊಂಡು ಬಂದದ್ದು ಲಕ್ಕವಳ್ಳಿ ರೇಂಜು ಆಫಿಸರವರ ಸುಪರ್ದಿನಲ್ಲಿರುತ್ತೆ. ಇದರ ಹಕ್ಕುದಾರರು ಯಾರಾದರೂ ಇದ್ದಲ್ಲಿ ಸದರಿ ಮರದ ಹಕ್ಕನ್ನು ಸ್ಥಿರಪಡಿಸಿ ಇರತಕ್ಕ ಲಿಖಿತವಾದ ಸ್ಟೇಟ್‌ಮೆಂಟನ್ನು ಈ ಲಾಗಾಯಿತು ಒಂದು ತಿಂಗಳ ವಳಗಾಗಿ ಕಡೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಲ್ಲಿ ಹಾಜರ್ಮಾಡತಕ್ಕದ್ದು ತಪ್ಪಿದಲ್ಲಿ ಸದರಿ ಮರದ ಬಾಧ್ಯತೆಯು ಯಾವ ಆಟಂಕವೂ ಇಲ್ಲದಂತೆ ಸರಕಾರಕ್ಕೆ ಬಳಪಡಿಸಿಕೊಳ್ಳುವದು.

2. ಸದರಿ ನಾಟುವನ್ನು ಸ್ವಾಧೀನಪಡಿಸಿಕೊಳ್ಳಲು ಹಕ್ಕುದಾರರಾಗತಕ್ಕವರು ಸದರಿ ನಾಟೂ ಪತ್ತೆದಾರರು ಮತ್ತು ಭೇದ್ರಪಡಿಸಿದ್ದಕ್ಕೆ ತಗಲಿದ ಲಾಗೋಡನ್ನು ಫಾರೆಸ್ಟು ಅಧಿಕಾರಿಗಳಿಗೆ ಕೊಡಲು ಬದ್ಧರಾಗಿರತಕ್ಕದ್ದು :—

ಜಾತಿ.	ನಾಟೂ ವಿವರ.	ಲಾಂಬಿ.	ಸುತ್ತು.
ಕರೀಮುತ್ತಿ ...	ದುಂಡು ಯಾವ ವಿಧವಾದ ಕಾಂಗಾರಿಯು ಆಗಿಲ್ಲ	10'	10'

ಬಿ. ಹಿರಾಸಿಂಗ್,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್, ಕಡೂರು ಡಿಸ್ಟ್ರಿಕ್ಟು.